ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002

ದೂರವಾಣಿ / Telephone: 0831-2407201, 0831-2407208,2407214
ಫ್ಯಾಕ್ಸ/Fax: 0831-2407208
e-mail: caozpbgm@gmail.com

ಕ್ರಸಂ/ಜಿಪಂಬೆ/ವರ್ಕಸಾಫ್ಟ್/ವಿವ- /2014-15 ದಿ:20-02-2015.

## ಸುತ್ತೋಲೆ

ವಿಷಯ: ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಛಾಯಾಚಿತ್ರ ಮತ್ತು ಇತರೆ ದಾಖಲೆಗಳನ್ನುಆರೋಹಿಸುವ ಕುರಿತು.

ಉಲ್ಲೇಖ:1)ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ&ಪಂ.ರಾಜ್ ಇಲಾಖೆ ಇವರ ಪತ್ರ ಸಂಖ್ಯೆ ಸಂ/ಗ್ರಾಅಪ/47/ಗ. ಕೋಶ/2014ದಿ: 04-12-2014.

2)ಈ ಕಾರ್ಯಾಲಯದ ಪತ್ರ ಸಂಖ್ಯೆ ಕ್ರಸಂ/ಜಿಪಂಬೆ/ವರ್ಕಸಾಫ್ಟ್/ವಿವ- /2014-15 ದಿ:20-02-2015.

3)ದಿನಾಂಕ:23/2/2015 ರಂದು RDPR ನಿಂದ ಜರುಗಿಸಿದ ವಿಡಿಯೋ ಕಾನ್ಫರೆನ್ಸ್ .

4)ಸರ್ಕಾರದ ಕಾರ್ಯದರ್ಶಿಗಳು,ಆರ್ಥಿಕ ಇಲಾಖೆ ಇವರ ಪತ್ರ ಸಂಖ್ಯೆ ಆಇ/ 14/ ಬಿಪಿಇ /2014ದಿ:12-01-2015

****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ (1)ರನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ಛಾಯಾಚಿತ್ರ MB ಮತ್ತು ಇತರೆ ದಾಖಲೆಗಳನ್ನು ಗಾಂಧಿ ಸಾಕ್ಷಿ ಕಾಯಕ (ವರ್ಕಸಾಫ್ಟ್) ತಂತ್ರಾಂಶದಲ್ಲಿ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದ್ದು, ಈ ಕುರಿತು ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ಹೆಚ್ಚಿನ ಕಾಳಜಿವಹಿಸಿ ಕ್ರಮವಹಿಸಲು ಸೂಚಿಸಿರುವರು.

ಆದಾಗ್ಯೂ ಕಾಮಗಾರಿಗಳ ಛಾಯಾಚಿತ್ರ ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಿದಾಗ ಹಲವಾರು ನ್ಯೂನತೆಗಳು ಸರ್ಕಾರದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ GSK ಮೂಲಕ Payment Advice ಸೃಜನೆ ಮಾಡುವುದನ್ನು ಅನುಷ್ಠಾನಾಧಿಕಾರಿಗಳ Login ID ನಲ್ಲಿ ತಡೆ ಹಿಡಿದು ಜಿಲ್ಲಾ ಪಂಚಾಯತನಲ್ಲಿ GSK ಆಡಿಟ್ ತಂಡವು ಪರಿಶೀಲಿಸಿ Approval ನೀಡಿದ ನಂತರವೇ ಅನುಷ್ಠಾನಾಧಿಕಾರಿಗಳು Payment Advice Generate ಮಾಡಿಕೊಳ್ಳಲು ಅವಕಾಶ ಕಲ್ಪಿಸಿದ ಹಿನ್ನೆಲೆಯಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡಲು ಉಲ್ಲೇಖ(2)ರನ್ವಯ ಜಿಲ್ಲಾ ಪಂಚಾಯತನಲ್ಲಿ ಅಧಿಕಾರಿ/ಸಿಬ್ಬಂದಿಗಳನ್ನೊಳಗೊಂಡ ಒಂದು ತಂಡ ರಚಿಸಿದ್ದು,ಸದರಿ ತಂಡದಿಂದ ಪರಿಶೀಲನೆಗೆ ಒಳಪಡಿಸಿ Payment Advice Generate ಮಾಡಿಕೊಂಡು ಪಾವತಿಗಾಗಿ ಕ್ರಮ ಕೈಗೊಳ್ಳಲು ಸೂಚಿಸಲಾಗಿತ್ತು.ಆದರೆ ಜಿಲ್ಲಾ ಪಂಚಾಯತಿಗೆ ಅಪೂರ್ಣವಾದ ಅಂದರೆ ಖಾಲಿ ಇರುವ WORK ID ಯ ಬಿಲ್ಲುಗಳ ಸಲ್ಲಿಕೆಯಿಂದ ತ್ವರಿತವಾಗಿ ಪರಿಶೀಲಿಸಲು ವ್ಯತ್ಯಯ ಉಂಟಾಗುತ್ತಿದೆ. ಈ ರೀತಿಯ ನಿರ್ಲಕ್ಷ್ಯ ಧೋರಣೆಯಿಂದಾಗಿ ಕಾಮಗಾರಿಗಳ ಪ್ರಗತಿ ಕುಂಠಿತವಾಗಿ ಅನುದಾನ ವ್ಯಪಗತವಾದಲ್ಲಿ ಇದಕ್ಕೆ ಅನುಷ್ಠಾನಾಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ತಿಳಿಯಿರಿ.ಉಲ್ಲೇಖ(3) ರ ವಿಡಿಯೋ ಕಾನ್ಫರೆನ್ಸನಲ್ಲಿ ತಿಳಿಸಿದಂತೆ ಖಜಾನೆ ಅಥವಾ ಬ್ಯಾಂಕ ಮೂಲಕ ನಿರ್ವಹಿಸಲಾಗುತ್ತಿರುವ ಎಲ್ಲ ವ್ಯವಹಾರಗಳು 31-03-2015 ಕ್ಕೆ ಕೊನೆಗೊಳ್ಳುತ್ತವೆ**[ವಿಶೇಷವಾಗಿ NRDWP ಯೋಜನೆ]** ಎಂಬ ಅಂಶವನ್ನು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.ಉಲ್ಲೇಖ(4)ರಲ್ಲಿ ಖಜಾನೆಗೆ ವಿವಿಧ ರೀತಿಯ ಬಿಲ್ಲುಗಳನ್ನು ಸಲ್ಲಿಸಲು ನಿಗದಿಪಡಿಸಿದ ಕಾಲಮಿತಿಯನ್ನು ಗಣನೆಗೆ ತೆಗೆದುಕೊಂಡು ಕಾರ್ಯೋನ್ಮುಖರಾಗಲು ಈ ಮೂಲಕ ಸೂಚಿಸಿದೆ.

ಇನ್ನೂ ಮುಂದೆ ಕಡ್ಡಾಯವಾಗಿ ಈ ಕೆಳಕಂಡ ಸಂಪೂರ್ಣ ಮಾಹಿತಿಯನ್ನು ತಂತ್ರಾಂಶದಲ್ಲಿ ದಾಖಲಿಸಿ Self Auditನಲ್ಲಿ Approve ಮಾಡಿ ಮತ್ತು ಅದರೊಂದಿಗೆ ಹಾರ್ಡಕಾಪಿಯ ದಾಖಲೆಗಳನ್ನು ಒಳಗೊಂಡಿರುವ ಕಾಮಗಾರಿಯ ಬಿಲ್ಲುಗಳನ್ನು ಮಾತ್ರ ಜಿಲ್ಲಾ ಪಂಚಾಯತಿಗೆ ತಮ್ಮ ಕಛೇರಿಯ ಒಬ್ಬ ಸಿಬ್ಬಂದಿ ಖುದ್ದಾಗಿ ಹಾಜರಾಗಿ GSK ಆಡಿಟ್ ತಂಡದಿಂದ ಪರಿಶೀಲಿಸಿಕೊಂಡು ಮುಂದಿನ ಕ್ರಮವಹಿಸಲು ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಿದೆ.

1)ಕಾಮಗಾರಿ ಸ್ಥಳದ ಸರಿಯಾದ ಮತ್ತು ನಿಖರವಾದ ಅಕ್ಷಾಂಶ-ರೇಖಾಂಶಗಳ ಮಾಹಿತಿ(GPS)

2)ಕಾಮಗಾರಿ ಆರಂಭಿಸುವ ಪೂರ್ವದಲ್ಲಿಯ ಸ್ಥಳದ ಛಾಯಾಚಿತ್ರ (initial Photo)

3)ಕಾಮಗಾರಿಯು ಪ್ರಗತಿಯಲ್ಲಿರುವ ಅಥವಾ ಅಂತಿಮ ಹಂತದ ಛಾಯಾಚಿತ್ರ(Work Stage/Final Photo)

4) ಕಾಮಗಾರಿ ವಿವರವನ್ನು ಐಟಂವಾರು ಅಳತೆ ಪುಸ್ತಕದಲ್ಲಿದಲ್ಲಿ ದಾಖಲಿಸಿ AEE ದೃಢಿಕರಿಸಿರುವುದು&EE ಬಿಲ್ಲ ಪಾಸ್ ಮಾಡಿರುವುದು.( MB Record&Passing Order)

5)ವಿಭಾಗ ಕಛೇರಿಯಲ್ಲಿ ಪಾಸಾದ ಬಿಲ್ಲಿನ ಛಾಯಾಪ್ರತಿ

ಸಹಿ/-

[ದೀಪ ಚೋಳನ್]

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಪ್ರತಿಯನ್ನು:ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ &ಪಂ.ರಾಜ್ ಇಲಾಖೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಪ್ರತಿಯನ್ನು:ನಿರ್ದೇಶಕರು(ಇ-ಆಡಳಿತ),ಮತ್ತು ಸ್ವ ಉದ್ಯೋಗ ಕಾರ್ಯಕ್ರಮ ಹಾಗೂಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ(ಪ್ರ) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ</u>

1)ಉಪ ಕಾರ್ಯದರ್ಶಿಗಳು-1,(ಆಡಳಿತ) ಜಿ.ಪಂ.ಬೆಳಗಾವಿ ಇವರಿಗೆ.

2)ಉಪ ಕಾರ್ಯದರ್ಶಿಗಳು-2,(ಅಭಿವೃದ್ಧಿ) ಜಿ.ಪಂ.ಬೆಳಗಾವಿ ಇವರಿಗೆ.

3)ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ.

4)ಮುಖ್ಯ ಯೋಜನಾಧಿಕಾರಿಗಳು,ಜಿ.ಪಂ.ಬೆಳಗಾವಿ

5)ಯೋಜನಾ ನಿರ್ದೇಶಕರು,ಡಿ.ಆರ್.ಡಿ.ಎ.ಕೋಶ.ಜಿ.ಪಂ.ಬೆಳಗಾವಿ.

6)ಕಾರ್ಯನಿರ್ವಾಹಕ ಅಭಿಯಂತರರು ಪಂ.ರಾ.ಇಂ.ವಿಭಾಗ ಬೆಳಗಾವಿ.

7)ಕಾರ್ಯನಿರ್ವಾಹಕ ಅಭಿಯಂತರರು ಪಂ.ರಾ.ಇಂ.ವಿಭಾಗ ಚಿಕ್ಕೋಡಿ.

8)ಕಾರ್ಯನಿರ್ವಾಹಕ ಅಭಿಯಂತರರು,ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,ಬೆಳಗಾವಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

9)ಕಾರ್ಯನಿರ್ವಾಹಕ ಅಧಿಕಾರಿಗಳು,ತಾಲ್ಲೂಕು ಪಂಚಾಯತ,____________________ಇವರಿಗೆ ಮಾಹಿತಿಗಾಗಿಹಾಗೂ ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ಸರ್ಕಾರದ ನಿರ್ದೇಶನ ತಲುಪಿಸಿ ಪಾಲನೆಯಾಗುವಂತೆ ಮಾಡುವ ಸೂಕ್ತ ಕ್ರಮಕ್ಕಾಗಿ.

10) ಖಜಾನೆಗಳ ಉಪ ನಿರ್ದೇಶಕರು,ಜಿಲ್ಲಾ ಖಜಾನೆ ಬೆಳಗಾವಿ ಇವರಿಗೆ ಮಾಹಿತಿಗಾಗಿ.

11) ಉಪ ಖಜಾನೆ ಅಧಿಕಾರಿಗಳು ಬೈಲಹೊಂಗಲ್,ಖಾನಾಪೂರ, ಸವದತ್ತಿ, ರಾಮದುರ್ಗ, ಅಥಣಿ, ಚಿಕ್ಕೋಡಿ, ಗೋಕಾಕ,ಹುಕ್ಕೇರಿ& ರಾಯಬಾಗ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ